## ಕರ್ನಾಟಕ ಸರ್ಕಾರ
## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

**ವಿಷಯ:** ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹ/ಸಹಾಯಕ ಪ್ರಾಧ್ಯಾಪಕರುಗಳಿಗೆ ಪಿ.ಹೆಚ್.ಡಿ. ಪದವಿ ಪಡೆದ ಪ್ರಯುಕ್ತ ಈಗಾಗಲೇ ಮಂಜೂರಾಗಿರುವ ಮುಂಗಡ ವೇತನ ಬಡ್ತಿಗಳನ್ನು ಪರಿಷ್ಕರಿಸುವ ಬಗ್ಗೆ.

**ಉಲ್ಲೇಖ:**
1) ಸರ್ಕಾರದ ಆದೇಶ ಸಂಖ್ಯೆ:ಇಡಿ/37/ಯುಎನ್ಇ 2009, ದಿನಾಂಕ: 24-12-2009.
2) ಸರ್ಕಾರದ ಪತ್ರ ಸಂಖ್ಯೆ:ಇಡಿ/195/ಡಿಸಿಇ 2014, ದಿನಾಂಕ:28-04-2017.
3) ಸರ್ಕಾರದ ಪತ್ರ ಸಂಖ್ಯೆ:ಇಡಿ/195/ಡಿಸಿಇ 2014, ದಿನಾಂಕ:17-01-2019.
4) ಸರ್ಕಾರದ ಪತ್ರ ಸಂಖ್ಯೆ:ಇಡಿ/220/ಡಿಸಿಇ 2019, ದಿನಾಂಕ:09-10-2019.

********

**ಪ್ರಸ್ತಾವನೆ:**

ಕಾಲೇಜು ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುತ್ತಿರುವ ಸಹ/ಸಹಾಯಕ ಪ್ರಾಧ್ಯಾಪಕರುಗಳಿಗೆ ಸೇವಾವಧಿಯಲ್ಲಿ ಪಿ.ಹೆಚ್.ಡಿ. ಪದವಿಯನ್ನು ಹೊಂದಿದ್ದಲ್ಲಿ ನಿಯಮಗಳನ್ವಯ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಲು ಉಲ್ಲೇಖ (1)ರ ಸರ್ಕಾರದ ಆದೇಶದ ಅಪೆಂಡಿಕ್ಸ್- IV 1(IV) ರಲ್ಲಿ " Teachers who completed their PhD degree while in service shall be entitled to three non-compounded increments " ಎಂದು ಅವಕಾಶ ಕಲ್ಪಿಸಲಾಗಿರುತ್ತದೆ. ಉಲ್ಲೇಖ (2)ರ ಸರ್ಕಾರಿ ಪತ್ರದಲ್ಲಿ **"The Compoundable advance increments for M.Phil/PhD degree qualifications acquired on or after 01-01-2006 as per 1996 UGC/ICAR package may be granted at the rate of 3% of basic pay+Grade pay and the same be added to basic pay in the pay band with monitory benefit from 24-12-2009 subject to the condition that the number of advance increments shall be limited to what is admissible in 1996 package".** ಎಂದು ಸೂಚಿಸಲಾಗಿದೆ.

ಉಲ್ಲೇಖ(3)ರ ಸರ್ಕಾರದ ಪತ್ರದಲ್ಲಿ ನೀಡಲಾಗಿರುವ ನಿರ್ದೇಶನಗಳನ್ವಯ ದಿನಾಂಕ:01/01/2006ರ ಪೂರ್ವ ಹಾಗೂ ನಂತರದ ದಿನಾಂಕಗಳಂದು ನೇಮಕಾತಿ ಹೊಂದಿದ್ದು, ಸೇವಾವಧಿಯಲ್ಲಿ ಪಿಹೆಚ್‌ಡಿ ಪದವಿ ಹೊಂದಿರುವ ಸಿಬ್ಬಂದಿಗಳಿಗೆ 2006 ರ ಯುಜಿಸಿ ನಿಯಮಗಳಂತೆ 03 ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡುವಂತೆ ನಿರ್ದೇಶನ ನೀಡಲಾಗಿರುತ್ತದೆ. ಉಲ್ಲೇಖ (4)ರ ಸರ್ಕಾರದ ಪತ್ರದಲ್ಲಿ ಅರ್ಹ ಬೋಧಕ ಸಿಬ್ಬಂದಿಗಳಿಗೆ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಅನುಮೋದಿಸುವ ಅಧಿಕಾರವನ್ನು ಆಯುಕ್ತರಿಗೆ ಪ್ರತ್ಯಾಯೋಜಿಸಲಾಗಿದ್ದು. ಅದರನ್ವಯ ಒಟ್ಟು 24 ಅಧ್ಯಾಪಕರುಗಳಿಗೆ ಈಗಾಗಲೇ ಮಂಜೂರಾಗಿರುವ ಮುಂಗಡ ವೇತನ ಬಡ್ತಿಗಳನ್ನು ಪರಿಷ್ಕರಿಸಲು ಕೆಳಕಂಡಂತೆ ಈ ಆದೇಶ.

**ಆದೇಶ ಸಂಖ್ಯೆ: ಡಿಸಿಇ/ಎಸ್ಎಸ್1/ಪಿಹೆಚ್‌ಡಿ/02/2021/ಸೇವಿ-1, ದಿನಾಂಕ: 28 -12-2021**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಉಲ್ಲೇಖ (1) ರಿಂದ (4)ರವರೆಗಿನ ಸರ್ಕಾರಿ ಆದೇಶ/ಸುತ್ತೋಲೆಗಳಲ್ಲಿನ ಮಾರ್ಗಸೂಚಿಗಳನ್ವಯ ದಿನಾಂಕ: 01/01/2006ರ ಪೂರ್ವ ಹಾಗೂ

ನಂತರದ ದಿನಾಂಕಗಳಂದು ನೇಮಕಾತಿ ಹೊಂದಿದ್ದು, ಸೇವಾವಧಿಯಲ್ಲಿ ಪಿಹೆಚ್‌ಡಿ ಪದವಿ ಹೊಂದಿರುವ ಪ್ರಾಧ್ಯಾಪಕರುಗಳಿಗೆ 2006ರ ಯುಜಿಸಿ ನಿಯಮಗಳಂತೆ 03 ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡುವಂತೆ ನಿರ್ದೇಶನ ನೀಡಲಾಗಿದ್ದು, ಅದರಂತೆ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಒಟ್ಟು 24 ಬೋಧಕರುಗಳಿಗೆ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿರುವಂತೆ ಪಿಹೆಚ್‌ಡಿ ಪದವಿ ಪಡೆದ ದಿನಾಂಕಕ್ಕೆ 01.01.2006ರ ಯು.ಜಿ.ಸಿ ವೇತನ ಶ್ರೇಣಿಯಲ್ಲಿ ಪಡೆಯುತ್ತಿದ್ದ ಮೂಲ ವೇತನ + ಎಜಿಪಿ = ಒಟ್ಟು ಮೂಲ ವೇತನದ ಶೇಕಡ 3ರ ದರದಲ್ಲಿ ವಾರ್ಷಿಕ ವೇತನ ಬಡ್ತಿಯನುಸಾರ ಮೂರು ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಿ ಆದೇಶಿಸಲಾಗಿದೆ.

**ಷರತ್ತುಗಳು:**

1) ಈ ಆದೇಶದಲ್ಲಿ ಮುಂಗಡ ವೇತನ ಬಡ್ತಿ ಮಂಜೂರಾತಿ ನೀಡಿರುವ ಪಿ.ಹೆಚ್.ಡಿ ಪದವಿಗಳನ್ನು ಮುಂದೆ ಯಾವುದೇ ಸೌಲಭ್ಯಗಳಿಗೆ ಪರಿಗಣಿಸತಕ್ಕದಲ್ಲ. (ಎ.ಪಿ.ಐ. ಆಧಾರಿತ ಎ.ಜಿ.ಪಿಗೆ ಹಾಗೂ ಇತರೆ ಸೌಲಭ್ಯದ ವಿನಾಯಿತಿಗೆ ಅವಕಾಶವಿರುವುದಿಲ್ಲ)
2) ಪಿ.ಹೆಚ್.ಡಿ. ಪದವಿ ಮುಂಗಡ ವೇತನ ಬಡ್ತಿಗಳು ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ಸುತ್ತೋಲೆ/ಪತ್ರಗಳಲ್ಲಿ ನಿಗದಿಪಡಿಸುವ ಷರತ್ತುಗಳಿಗೆ ಒಳಪಟ್ಟಿರುತ್ತದೆ.
3) ಪ್ರಾಂಶುಪಾಲರು ಪ್ರಸ್ತಾವನೆಯನ್ನು ಸಲ್ಲಿಸುವಾಗ ಬೋಧಕರುಗಳ ಮಾಹಿತಿಯನ್ನು ನೀಡಿರುವ ಸಂದರ್ಭದಲ್ಲಿ ತಪ್ಪು ಮಾಹಿತಿಯನ್ನು ಒದಗಿಸಿರುವುದು ಕಂಡುಬಂದಲ್ಲಿ ಸಂಬಂಧಿಸಿದ ಬೋಧಕರ ಪಿ.ಹೆಚ್.ಡಿ. ಪದವಿ ಮುಂಗಡ ವೇತನ ಬಡ್ತಿಗಳನ್ನು ಯಾವುದೇ ಮುನ್ಸೂಚನೆಯನ್ನು ನೀಡದೇ ಹಿಂಪಡೆಯಲಾಗುವುದು.
4) ಪಿ.ಹೆಚ್.ಡಿ. ಪದವಿ ಮುಂಗಡ ವೇತನ ಬಡ್ತಿಯ ಮಂಜೂರಾತಿ ಪ್ರಯುಕ್ತ ಹೆಚ್ಚುವರಿಯಾಗಿ ನಿಗಧೀಕರಣ ಮಾಡಿ ಹೆಚ್ಚುವರಿ ಪಾವತಿ ಮಾಡಿದ್ದಲ್ಲಿ ವೇತನ ಮರುನಿಗಧೀಕರಣ ಹಾಗೂ ವ್ಯತ್ಯಾಸದ ಮೊಬಲಗು ಮರುವಸೂಲಾತಿ ಮಾಡುವ ಷರತ್ತಿಗೆ ಒಳಪಟ್ಟಿರುತ್ತದೆ.
5) ಪಿ.ಹೆಚ್.ಡಿ ಪದವಿ ಮುಂಗಡ ವೇತನ ಬಡ್ತಿಯ ದಿನಾಂಕವನ್ನು ಸೇವಾ ಜೇಷ್ಠತೆಗೆ ಪರಿಗಣಿಸಲು ಬರುವುದಿಲ್ಲ.
6) ಈ ಆದೇಶದನ್ವಯ ಕ್ಲೇಮು ಮಾಡಲಾದ ಪಿ.ಹೆಚ್.ಡಿ ಪದವಿ ಮುಂಗಡ ವೇತನ ಬಡ್ತಿಯ ವ್ಯತ್ಯಾಸದ ಮೊಬಲಗನ್ನು ಸ್ಥಳೀಯ/ಮಹಾಲೇಖಪಾಲರ ಲೆಕ್ಕ ಪರಿಶೋಧನೆಗೆ ಒಳಪಟ್ಟಿರುತ್ತದೆ.
7) ಸಹ/ಸಹಾಯಕ ಪ್ರಾಧ್ಯಾಪಕರುಗಳ ಪಿ.ಹೆಚ್.ಡಿ ಪದವಿ ಮುಂಗಡ ವೇತನ ಬಡ್ತಿಯನ್ನು ಸಂಬಂಧಪಟ್ಟ ಪ್ರಾಂಶುಪಾಲರುಗಳು ಸದರಿಯವರುಗಳ ಸೇವಾ ಪುಸ್ತಕದಲ್ಲಿ ನಮೂದಿಸತಕ್ಕದ್ದು.
8) ಸದರಿಯವರು ಪಡೆದಿರುವ ಪಿಹೆಚ್.ಡಿ ಪದವಿಯ ದಾಖಲಾತಿಗಳನ್ನು ಪ್ರಾಂಶುಪಾಲರು ತಮ್ಮ ಹಂತದಲ್ಲಿಯೇ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.
9) ದಿನಾಂಕ:01.01.2006ರ ಯುಜಿಸಿ ವೇತನ ಶ್ರೇಣಿಯಲ್ಲಿ ಪಿಹೆಚ್‌ಡಿ ಪದವಿ ಮುಂಗಡ ವೇತನ ಬಡ್ತಿಗಳನ್ನು ಪ್ರಾಂಶುಪಾಲರು/ಇಲಾಖಾ ಹಂತದಲ್ಲಿ ಈ ಪಟ್ಟಿಯಲ್ಲಿನ ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರುಗಳಿಗೆ ಈಗಾಗಲೇ ಮಂಜೂರಾತಿ ನೀಡಲಾಗಿದೆಯೇ ಎಂಬ ಬಗ್ಗೆ ಪ್ರಾಂಶುಪಾಲರು ಪರಿಶೀಲಿಸಿ ಸ್ಪಷ್ಟ ಪಡಿಸಿಕೊಳ್ಳತಕ್ಕದ್ದು. ಮಂಜೂರಾತಿ ನೀಡದಿದ್ದಲ್ಲಿ ಈ ಪಟ್ಟಿಯಲ್ಲಿರುವ ಮಂಜೂರಾತಿಯನ್ನು ಪರಿಗಣಿಸತಕ್ಕದ್ದು.

10) ಈಗಾಗಲೇ ಪಿ.ಹೆಚ್.ಡಿಗಾಗಿ ಎ.ಜಿ.ಪಿಯಲ್ಲಿ ಸೇವಾ ವಿನಾಯಿತಿಯನ್ನು ಪಡೆಯದಿದ್ದವರಿಗೆ ಮಾತ್ರ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿ ನೀಡಲು ಅವಕಾಶವಿದ್ದು, ಸದರಿಯವರು ಎ.ಜಿ.ಪಿಯಲ್ಲಿ ಈ ಸೌಲಭ್ಯವನ್ನು ಪಡೆದಿರುವ ಬಗ್ಗೆ ಪರಿಶೀಲಿಸಿಕೊಂಡು ಪಿ.ಹೆಚ್.ಡಿ ಬಡ್ತಿಗಳನ್ನು ಮಂಜೂರು ಮಾಡಲು ಪ್ರಾಂಶುಪಾಲರು ಕ್ರಮವಹಿಸತಕ್ಕದ್ದು.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

**<u>ಇವರಿಗೆ:</u>**

1) ಇಲಾಖೆಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರುಗಳಿಗೆ- ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ (ಸದರಿ ಆದೇಶದಲ್ಲಿನ ಪಿಹೆಚ್‌ಡಿ ಮುಂಗಡ ವೇತನ ಬಡ್ತಿಗಳ ಮಂಜೂರಾತಿಯನ್ನು ಸಂಬಂಧಿಸಿದ ಸಹ/ಸಹಾಯಕ ಪ್ರಾಧ್ಯಾಪಕರುಗಳ ಗಮನಕ್ಕೆ ತರುವಂತೆ ಹಾಗೂ ವೇತನ ನಿಗದೀಕರಣದ ಪ್ರಸ್ತಾವನೆಯನ್ನು ನೇರವಾಗಿ ಮಹಾಲೇಖಪಾಲರ ಕಛೇರಿಗೆ ಸಲ್ಲಿಸುವಂತೆ ತಿಳಿಸಲಾಗಿದೆ)
2) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು-ಮಾಹಿತಿಗಾಗಿ.
4) ಇಲಾಖೆಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರ ಗಮನಕ್ಕಾಗಿ.

**<u>ಪ್ರತಿರವಾನೆ (ಆಂತರಿಕ):</u>**

1) ಲೆಕ್ಕಾಧಿಕಾರಿಗಳು, ಹಣ ಮತ್ತು ಪಾವತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಮಾಹಿತಿ ಹಾಗೂ ಅಗತ್ಯ ಕ್ರಮಗಾಗಿ.
2) ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ಎಲ್ಲಾ ಅಧಿಕಾರಿಗಳ ಆಪ್ತಶಾಖೆ,
3) ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ,
4) ಪತ್ರಾಂಕಿತ ವ್ಯವಸ್ಥಾಪಕರು/ಅಧೀಕ್ಷಕರು, ಬಡ್ತಿ ಮತ್ತು ಸ್ಥಾನೀಕರಣ ವಿಭಾಗ, ಕಾ.ಶಿ.ಆಯುಕ್ತರ ಕಛೇರಿ, ಬೆಂಗಳೂರು– (ಸಹ/ಸಹಾಯಕ ಪ್ರಾಧ್ಯಾಪಕರುಗಳಿಗೆ ಪಿಹೆಚ್‌ಡಿ ಪದವಿ ಮುಂಗಡ ವೇತನ ಬಡ್ತಿಗಳನ್ನು ಮಂಜೂರಾತಿ ನೀಡಿದ್ದು, ಸದರಿ ಬೋಧಕರುಗಳಿಗೆ ಸ್ಥಾನೀಕರಣ/ಎಪಿಐ ಮಂಜೂರು ಮಾಡುವ ಸಂದರ್ಭದಲ್ಲಿ ಈ ಆದೇಶದಲ್ಲಿ ವಿಧಿಸಿರುವ ಷರತ್ತುಗಳು ಹಾಗೂ ಸರ್ಕಾರಿ ಆದೇಶ ಪತ್ರಗಳಲ್ಲಿ ವಿವರಿಸಿರುವಂತೆ ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿ ಸ್ಥಾನೀಕರಣ/ಎಪಿಐ ಮಂಜೂರಾತಿ ಮಾಡುವಾಗ ಪರಿಶೀಲಿಸಿ ಕ್ರಮವಹಿಸಲು ಸೂಚಿಸಲಾಗಿದೆ).
5) ಪತ್ರಾಂಕಿತ ವ್ಯವಸ್ಥಾಪಕರು/ಅಧೀಕ್ಷಕರು, ಆಯವ್ಯಯ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
6) ಪತ್ರಾಂಕಿತ ವ್ಯವಸ್ಥಾಪಕರು/ಅಧೀಕ್ಷಕರು, ಕಾನೂನು ಕೋಶ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು-ಮಾಹಿತಿಗಾಗಿ.
7) ಮಾಹಿತಿ ಅಧಿಕಾರಿಗಳು, ಮಾಹಿತಿ ಹಾಗೂ ತಂತ್ರಜ್ಞಾನ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
8) ಕಛೇರಿ ಪ್ರತಿ.

# ಕಾಲೇಜು ಶಿಕ್ಷಣ ಇಲಾಖೆ

ಅನುಬಂಧ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪಿ.ಹೆಚ್.ಡಿ ಪದವಿ ಪಡೆದಿರುವ ಸಹ/ಸಹಾಯಕ ಪ್ರಾಧ್ಯಾಪಕರುಗಳಿಗೆ ಈ ಕಛೇರಿಯ ವಿವಿಧ ಆದೇಶಗಳಲ್ಲಿ 1996ರ ವೇತನ ಶ್ರೇಣಿಯಲ್ಲಿ ಮಂಜೂರು / ಪರಿಷ್ಕರಣೆ ಮಾಡಲಾದ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಸರ್ಕಾರದ ಪತ್ರ ಸಂಖ್ಯೆ:ಇಡಿ/195/ಡಿಸಿಇ 2014, ದಿನಾಂಕ:17-01-2019 ರನ್ವಯ 2006ರ ಯುಜಿಸಿ ವೇತನ ಶ್ರೇಣಿಯ ನಿಯಮಗಳಂತೆ 03 ಮುಂಗಡ ವೇತನ ಬಡ್ತಿಗಳನ್ನಾಗಿ ಪರಿಷ್ಕರಿಸಿ ಮೂಲ ವೇತನಕ್ಕೆ ಸೇರಿಸಿ ಪರಿವರ್ತಿಸಲಾಗಿರುವ ಪಟ್ಟಿ

**ಆದೇಶ ಸಂಖ್ಯೆ: ಡಿಸಿಇ/ಎಸ್.ಎಸ್-1/ಪಿ.ಹೆಚ್.ಡಿ/02/2021/ಸೇವಿ-1, ಬೆಂಗಳೂರು, ದಿನಾಂಕ: 28 -12-2021.**

| ಕ್ರ. ಸಂ | ಬೋಧಕರ ಹೆಸರು ಶ್ರೀ/ಶ್ರೀಮತಿ ಪದನಾಮ/ಕಾಲೇಜಿನ ಹೆಸರು | ವಿಷಯ | ನೇಮಕಾತಿ ದಿನಾಂಕ | ಪಿ.ಹೆಚ್.ಡಿ ಪದವಿ ಪಡೆದ ದಿನಾಂಕ | ಈಗಾಗಲೇ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಲಾದ ಆದೇಶ ಸಂಖ್ಯೆ ಮತ್ತು ದಿನಾಂಕ | ಪಿ.ಹೆಚ್.ಡಿ ಪದವಿ ಪಡೆದ ದಿನಾಂಕ/ನೇಮಕಾತಿ ದಿನಾಂಕಕ್ಕೆ ಪಡೆಯುತ್ತಿದ್ದ ಮೂಲ ವೇತನ ಮತ್ತು ವೇತನ ಶ್ರೇಣಿ ರೂ | ಪರಿಷ್ಕರಿಸಿ ಮಂಜೂರು ಮಾಡಿರುವ ಮುಂಗಡ ವೇತನ ಬಡ್ತಿಗಳ ದರ ರೂ | ಮಂಜೂರು ಮಾಡಲಾಗಿರುವ ಮುಂಗಡ ವೇತನ ಬಡ್ತಿಗಳ ಸಂಖ್ಯೆ | ಪರಿಷ್ಕರಿಸಿ ಮಂಜೂರು ಮಾಡಲಾಗಿರುವ ಮುಂಗಡ ವೇತನ ಬಡ್ತಿಯ ಒಟ್ಟು ಮೊತ್ತ | ಪರಿಷ್ಕರಿಸಿ ಮಂಜೂರು ಮಾಡಲಾದ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು ಸೇರಿಸಿ ಮೂಲ ವೇತನ +ಎಜಿಪಿ+ಪಿ.ಹೆಚ್.ಡಿ ಬಡ್ತಿ ವೇತನ | ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳಿಗೆ ಅರ್ಹತೆ ಹೊಂದಿದ ದಿನಾಂಕ | ಆರ್ಥಿಕ ಸೌಲಭ್ಯಕ್ಕೆ ಅರ್ಹತೆ ಹೊಂದಿದ ದಿನಾಂಕ |
|---|---|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** | **12** | **13** |
| 1 | ವಿ ವೆಂಕಟೇಶ್ ಸಹ ಪ್ರಾಧ್ಯಾಪಕರು ಸಪ್ರದಕಾ, ಚನ್ನಪಟ್ಟಣ | ಇತಿಹಾಸ | 21-08-1992 | 24-11-2001 | ಕಾಶಿಇ/20/ಮುವೇಬ/2008/ಸಿವಿ-2, ದಿನಾಂಕ:02-04-2008 (ಕ್ರ.ಸಂ:44) | 24050+8000= 32050 (15600-39100) | 970 | 3 | 2910 | **24050+8000+ 2910=34960** | 19-09-2007 | 24-12-2009 |
| 2 | ಡಿ ಎಂ ಜವಳಕರ ಸಹ ಪ್ರಾಧ್ಯಾಪಕರು ಸಪ್ರದಕಾ ಖಾನಾಪೂರ, ಬೆಳಗಾವಿ (ಜಿ) | ಸಮಾಜಶಾಸ್ತ್ರ | 18-08-1992 | 30-07-2007 | '- | 25990+8000= 33990 (15600-39100) | 1020 | 3 | 3060 | **25990+8000+ 3060 = 37050** | 30-07-2007 | 24-12-2009 |

| | | | | | | | | | | | | |
|---|---|---|---|---|---|---|---|---|---|---|---|---|
| 3 | ಕೋಮಲ ಎ ಸಿ ಸಹ ಪ್ರಾಧ್ಯಾಪಕರು ಸಪ್ರದಕಾ, ಕೋಲಾರ | ಅರ್ಥಶಾಸ್ತ್ರ | 24-06-1996 | 13-03-2003 | ಕಾಶಿಇ/01/ಹೆವೇಬ/2007-08/ಸಿವಿ-2, ದಿನಾಂಕ:09-03-2008 (ಕ್ರ.ಸಂ:35) | 23230+8000= 31230 (15600-39100) | 940 | 3 | 2820 | **23230+8000+ 2820=34050** | 19-09-2007 | 24-12-2009 |
| 4 | ದಾದಾಪೀರ್ ಬಿ ಸಿ ಸಹ/ಸಹಾಯಕ ಪ್ರಾಧ್ಯಾಪಕರು ಸಪ್ರದಮಕಾ, ದಾವಣಗೆರೆ | ಕನ್ನಡ | 17-08-1992 | 31-08-2004 | ಕಾಶಿಇ/515/ಪಿ.ಹೆಚ್.ಡಿ/ಎಂ. ಫಿಲ್/ ಮುವೇಬ/2015-16/ಸೇವಿ-1, ದಿನಾಂಕ:18-04-2016 (ಕ್ರ ಸಂ : 07) ಕಾಶಿಇ/01/ಹೆವೇಬ/2007-08/ ಸಿವಿ2, ದಿನಾಂಕ:19-03-2008 (ಕ್ರ ಸಂಖ್ಯೆ:19) | 24050+8000= 32050 (15600-39100) | 970 | 3 | 2910 | **24050+8000+ 2910= 34960** | 19-09-2007 | 24-12-2009 |
| 5 | ಹೆಚ್ ಗುಡ್ಡದೇಶ್ವರಪ್ಪ ಸಹ/ಸಹಾಯಕ ಪ್ರಾಧ್ಯಾಪಕರು ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ | ಇತಿಹಾಸ | 12-08-1992 | 04-06-2005 | ಕಾಶಿಇ/01/ಹೆವೇಬ/2007-08/ ಸಿವಿ2, ದಿನಾಂಕ:19-03-2008 (ಕ್ರ ಸಂ:25) ಕಾಶಿಇ/515/ಪಿ.ಹೆಚ್.ಡಿ/ಎಂ. ಫಿಲ್/ ಮುವೇಬ/2015-16/ಸೇವಿ-1, ದಿನಾಂಕ:18-04-2016 (ಕ್ರ ಸಂ:46) | 24050+8000= 32050 (15600-39100) | 970 | 3 | 2910 | **24050+8000+ 2910=34960** | 19-09-2007 | 24-12-2009 |
| 6 | ಯಲ್ಲಪ್ಪ ಮಾರುತಿ ಭಜಂತ್ರಿ ಸಹ ಪ್ರಾಧ್ಯಾಪಕರು ಸಪ್ರದಕಾ, ರಾಜನಗರ, ಹುಬ್ಬಳ್ಳಿ | ಕನ್ನಡ | 05-08-1996 | 21-09-2002 | ಕಾಶಿಇ/20/ಮುವೇಬ/ 2008/ಸಿವಿ-2, ದಿನಾಂಕ:24-06-2008 (ಕ್ರ.ಸಂ:47) | 22320+8000= 30320 (15600-39100) | 910 | 3 | 2730 | **22320+8000+ 2730= 33050** | 19-09-2007 | 24-12-2009 |

| | | | | | | | | | | | |
|---|---|---|---|---|---|---|---|---|---|---|---|
| 7 | ಕೆ ನಾರಾಯಣಸ್ವಾಮಿ ಸಹ ಪ್ರಾಧ್ಯಾಪಕರು ಸಪ್ರದಕಾ ದಾವಣಗೆರೆ | ಕನ್ನಡ | 14-10-1997 | 29-12-2007 | ಕಾಶಿಇ/20/ಮುವೇಬ/ 2008/ಸಿವಿ-2, ದಿನಾಂಕ:24-10-2008 (ಕ್ರ.ಸಂ: 03) | 23170+7000= 30170 (15600-39100) | 910 | 3 | 2730 | **23170+7000+ 2730= 32900** | 29-12-2007 | 24-12-2009 |
| 8 | ಹೆಚ್.ಪಿ. ತಬಸುಮ್ ನಾಜ್, ಪ್ರಭಾರ ಪ್ರಾಂಶುಪಾಲರು, ಸ.ವಿ.ಕಾ ಹಾಸನ | ಉರ್ದು | 20-02-1991 | 25-08-2006 | ಕಾಶಿಇ/20/ಮು.ವೇ.ಬ/2008/ಸಿವಿ-2, ದಿನಾಂಕ:24-06-2008 (ಕ್ರ.ಸಂ-42) | 41680+9000= 46400 (37400-67000) | 1530 | 3 | 4590 | **41680+9000+ 4590=55270** | 25-08-2006 | 24-12-2009 |
| 9 | ಗೋವಿಂದ ಶೆಟ್ಟಿ, ಪ್ರಭಾರ ಪ್ರಾಂಶುಪಾಲರು, ಸಪ್ರದಕಾ, ಜಯನಗರ, ಬೆಂಗಳೂರು. | ಇತಿಹಾಸ | 20-02-1991 | 03-12-2007 | ಕಾಶಿಇ/20/ಮು.ವೇ.ಬ/2008/ ಸಿವಿ-2, ದಿನಾಂಕ:02-04-2008 (ಕ್ರ.ಸಂ-07) | 40240+9000= 49240 (37400-67000) | 1480 | 3 | 4440 | **40240+9000+ 4440=53680** | 03-12-2007 | 24-12-2009 |
| 10 | ವಿ. ಸೌಭಾಗ್ಯಲಕ್ಷ್ಮೀ ನಿವೃತ್ತ ಸಹ/ಸಹಾಯಕ ಪ್ರಾಧ್ಯಾಪಕರು, ಮ.ಮ.ಕ.ಕಾ, ಮೈಸೂರು. | ಹಿಂದಿ | 20-02-1991 | 09-07-2003 | ಕಾಶಿಇ/20/ಮು.ವೇ.ಬ/2008/ ಸಿವಿ-2, ದಿನಾಂಕ:02-04-2008 (ಕ್ರ.ಸಂ-31) | 37400+9000= 46400 (37400-67000) | 1400 | 3 | 4200 | **37400+9000+ 4200=50600** | 19-09-2007 | 24-12-2009 |
| 11 | ರಂಗಸ್ವಾಮಿ ಬಿ.ಟಿ, ಸಹ/ಸಹಾಯಕ ಪ್ರಾಧ್ಯಾಪಕರು, ಸಪ್ರದಕಾ, ಜಯನಗರ. | ಕನ್ನಡ | 20-02-1991 | 23-08-2004 | ಕಾಶಿಇ/01/ಮುವೇಬ/2008/ಸಿವಿ-2, ಬೆಂಗಳೂರು, ದಿನಾಂಕ: 05-05-2008, (ಕ್ರ.ಸಂ-31) | 38800+9000= 47800 (37400-67000) | 1440 | 3 | 4320 | **38800+9000+ 4320=52120** | 19-09-2007 | 24-12-2009 |
| 12 | ಶ್ರೀಲಕ್ಷ್ಮೀ ಕೆ.ಆರ್, ಸಹ/ಸಹಾಯಕ ಪ್ರಾಧ್ಯಾಪಕರು, ಸಪ್ರದಕಾ, ಜಯನಗರ, ಬೆಂಗಳೂರು. | ವಾಣಿಜ್ಯಶಾಸ್ತ್ರ | 20-02-1991 | 05-07-2004 | ಕಾಶಿಇ/20/ಮು.ವೇ.ಬ/2008/ ಸಿವಿ-2, ದಿನಾಂಕ:02-04-2008 (ಕ್ರ.ಸಂ-36) | 38800+9000= 47800 (37400-67000) | 1440 | 3 | 4320 | **38800+9000+ 4320=52120** | 19-09-2007 | 24-12-2009 |

| | | | | | | | | | | | |
|---|---|---|---|---|---|---|---|---|---|---|---|
| 13 | ನೀಲಮ್ಮ ನಿವೃತ್ತ ಪ್ರಾಂಶುಪಾಲರು (ಗ್ರೇಡ್-1), ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾರೋಹಳ್ಳಿ | ಕನ್ನಡ | 07-08-1986 | 14-06-2001 | ಕಾಶಿಇ/01/ಮುವೇಬ/2008/ಸಿ ಪಿ-2, ಬೆಂಗಳೂರು, ದಿನಾಂಕ: 05-05-2008 (ಕ್ರ.ಸಂ-21) | 38800+9000= 47800 (37400-67000) | 1440 | 3 | 4320 | **38800+9000+ 4320=52120** | 19-09-2007 | 24-12-2009 |
| 14 | ಮಹಾಂತೇಶ ಎಂ ನಂದೆಪ್ಪನವರ ಸಹಾಯಕ ಪ್ರಾಧ್ಯಾಪಕರು ಸರಕಾರಿ ಮಹಾವಿದ್ಯಾಲಯ ಗುಲಬರ್ಗಾ. | ಗಣಿತಶಾಸ್ತ್ರ | 24-12-2007 | 21-01-2009 | ಕಾಶಿಇ/219/ಮುವೇಬ/2008/ಸಿ ಪಿ-2, ದಿನಾಂಕ:25-04-2009 ( ಕ್ರ.ಸಂ.04) | 16250+6000 (15600- 39100) | 670 | 3 | 2010 | **16250+6000+ 2010=24260** | 21-01-2009 | 24-12-2009 |
| 15 | ರೇಖಾ ಬಿ ಆರ್ ಸಹಾಯಕ ಪ್ರಾಧ್ಯಾಪಕರು ಸರಕಾರಿ ಮಹಾವಿದ್ಯಾಲಯ, ಗುಲಬರ್ಗಾ.. | ಎಲೆಕ್ಟ್ರಾನಿಕ್ಸ್ | 22-01-2008 | 02-09-2008 | ಕಾಶಿಇ/219/ಮುವೇಬ/2008/ಸಿ ಪಿ-2, ದಿನಾಂಕ:04-01-2009 ( ಕ್ರ.ಸಂ.01) | 15600+6000 (15600- 39100) | 650 | 3 | 1950 | **15600+6000+ 1950=23550** | 02-09-2008 | 24-12-2009 |
| 16 | ಮೀನಾಕ್ಷಿ ಭರತನೂರ ಸಹ ಪ್ರಾಧ್ಯಾಪಕರು ಸರಕಾರಿ ಮಹಾವಿದ್ಯಾಲಯ, ಕಲಬುರಗಿ | ಸಮಾಜಶಾಸ್ತ್ರ | 02-08-1992 | 13-02-2009 | ಕಾಶಿಇ/263/ಪಿಹೆಚ್‌ಡಿ/ಮುವೇಬಮಂ/2015-16/ಸೇವಿ-1(ಭಾಗ-2), ಬೆಂಗಳೂರು ದಿನಾಂಕ:03-12-2015 (ಕ್ರ ಸಂ: 01) | 40240+9000= 49240 (37400- 67000) | 1480 | 3 | 4440 | **40240+9000+ 4440=53680** | 13-02-2009 | 24-12-2009 |
| 17 | ಹೆಚ್.ಎಸ್. ವಿರೂಪಾಕ್ಷಪ್ಪ ಸಹ ಪ್ರಾಧ್ಯಾಪಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಳೆಹೊನ್ನೂರು | ಕನ್ನಡ | 29-05-2003 | 19-11-2009 | ಕಾಶಿಇ/263/ಪಿಹೆಚ್‌ಡಿ/ಮುವೇಬಮಂ/2015-16/ಸೇವಿ-1(ಭಾಗ-2), ಬೆಂಗಳೂರು ದಿನಾಂಕ:03-12-2015 (ಕ್ರ ಸಂ: 05) | 19410+7000= 26410 (15600- 39100) | 800 | 3 | 2400 | **19410+7000+ 2400=28810** | 19-11-2009 | 24-12-2009 |

| | | | | | | | | | | | | |
|---|---|---|---|---|---|---|---|---|---|---|---|---|
| 18 | ಸುನೀತಾ ವಿ<br>ಸಹ ಪ್ರಾಧ್ಯಾಪಕರು<br>ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು (ಸ್ವಾಯತ್ತ), ಹಾಸನ | ಸಮಾಜಶಾಸ್ತ್ರ | 15-09-1992 | 19-12-2008 | ಕಾಶಿಇ/263/ಪಿಹೆಚ್‌ಡಿ/ಮುವೇಬಮಂ/2015-16/ಸೇವಿ-1(ಭಾಗ-2), ಬೆಂಗಳೂರು ದಿನಾಂಕ:03-12-2015 (ಕ್ರ ಸಂ: 05) | 38800+9000= 47800 (37400-67000) | 1440 | 3 | 4320 | **38800+9000+ 4320=52120** | 19-12-2008 | 24-12-2009 |
| 19 | ಫಕೀರನಾಯ್ಕ ಡಿ ಗಡ್ಡಿಗೌಡರ ಸಹಾಯಕ ಪ್ರಾಧ್ಯಾಪಕರು, ಸಪ್ರದಮಕಾ, ಬೈಲಹೊಂಗಲ | ಕನ್ನಡ | 29-10-2007 | 29-05-2014 | ಕಾಶಿಇ/263/ಪಿಹೆಚ್‌ಡಿ/ಮುವೇಬಮಂ/2015-16/ ಸೇವಿ-1(ಭಾಗ-2), ಬೆಂಗಳೂರು ದಿನಾಂಕ:08-12-2015 (ಕ್ರ ಸಂ:25) | 19810+6000= 25810 (15600-39100) | 780 | 3 | 2340 | **19810+6000+ 2340=28150** | 29-05-2014 | 29-05-2014 |
| 20 | ದೇವರಾಜ್ ಪಿ<br>ಸಹ ಪ್ರಾಧ್ಯಾಪಕರು, ಸಪ್ರದಕಾ ಕೊಪ್ಪ, ಚಿಕ್ಕಮಗಳೂರು ಜಿಲ್ಲೆ. | ಅರ್ಥಶಾಸ್ತ್ರ | 10-01-1985 | 22-02-2010 | ಕಾಶಿಇ/263/ಪಿಹೆಚ್‌ಡಿ/ಮುವೇಬಮಂ/2015-16/ ಸೇವಿ-1 (ಭಾಗ-2), ಬೆಂಗಳೂರು ದಿನಾಂಕ:29-07-2015 (ಕ್ರ ಸಂ:06) | 43250+9000= 52250 (37400-67000) | 1570 | 3 | 4710 | **43250+9000+ 4710=56960** | 22-02-2010 | 22-02-2010 |
| 21 | ಆರ್ ಮಹೇಶ<br>ಸಹ ಪ್ರಾಧ್ಯಾಪಕರು, ಸಪ್ರದಕಾ, ಭರಮಸಾಗರ | ಕನ್ನಡ | 14-08-1992 | 06-11-2009 | ಕಾಶಿಇ/263/ಪಿಹೆಚ್‌ಡಿ/ಮುವೇಬಮಂ/2015-16/ ಸೇವಿ-1(ಭಾಗ-2), ಬೆಂಗಳೂರು ದಿನಾಂಕ:03-12-2015 (ಕ್ರ ಸಂ: 04) | 40240+9000= 49240 (37400-67000) | 1480 | 3 | 4440 | **40240+9000+ 4440=53680** | 06-11-2009 | 24-12-2009 |
| 22 | ಜೆ ರಾಜೇಶ್ವರಿ<br>ಸಹ ಪ್ರಾಧ್ಯಾಪಕರು, ಮಮವಿಕಾ, ಮೈಸೂರು | ಗೃಹವಿಜ್ಞಾನ | 22-07-1993 | 06-06-2011 | ಕಾಶಿಇ/263/ಪಿಹೆಚ್‌ಡಿ/ಮುವೇಬಮಂ/2015-16/ ಸೇವಿ-1(ಭಾಗ-2), ಬೆಂಗಳೂರು ದಿನಾಂಕ:08-12-2015 (ಕ್ರ ಸಂ:14) | 41720+9000= 50720 (37400-67000) | 1530 | 3 | 4590 | **41720+9000+ 4590=55310** | 06-06-2011 | 06-06-2011 |

| | | | | | | | | | | | |
|---|---|---|---|---|---|---|---|---|---|---|---|
| 23 | ಯಶೋದ<br>ಸಹಾಯಕ ಪ್ರಾಧ್ಯಾಪಕರು,<br>ಸಪ್ರುದಮಕಾ, ಸಾಗರ,<br>ಶಿವಮೊಗ್ಗ ಜಿಲ್ಲೆ | ವಾಣಿಜ್ಯಶಾಸ್ತ್ರ | 21-01-2008 | 28-02-2015 | ಕಾಶಿಇ/263/ಪಿಹೆಚ್‌ಡಿ/ಮುವೇಬಮಂ/ 2015-16/ಸೇವಿ-1 (ಭಾಗ-2), ಬೆಂಗಳೂರು<br>ದಿನಾಂಕ:03-12-2015<br>(ಕ್ರ ಸಂ:27) | 21420+7000= 28420 (15600-39100) | 860 | 3 | 2580 | **21420+7000+ 2580=31000** | 28-02-2015 | 28-02-2015 |
| 24 | ಡಿ ರಾಜಶೇಖರನ್<br>ಸಹ ಪ್ರಾಧ್ಯಾಪಕರು<br>ಸರ್ಕಾರಿ ಕಲಾ ಕಾಲೇಜು<br>ಬೆಂಗಳೂರು | ಭೂಗೋಳಶಾಸ್ತ್ರ | 29-12-1992 | 18-03-2003 | ಕಾಶಿಇ/219/ಮುವೇಬ/2008/ಸಿವಿ-2,<br>ದಿನಾಂಕ:09-08-2008<br>( ಕ್ರ.ಸಂ.07) | 24050+8000= 32010 (15600-39100) | 970 | 3 | 2910 | **24050+8000+ 2910=34960** | 19-09-2007 | 24-12-2009 |

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**